ಮರಾಠಾ ಸಮುದಾಯ ಮುಖ್ಯವಾಹಿನಿಗೆ ತರುವಲ್ಲಿ ರಾಜ್ಯ ಸರಕಾರ ಬದ್ಧವಾಗಿದೆ. ಜು. 19ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಕರ್ನಾಟಕ ಮರಾಠಾ ಸಮುದಾಯಗಳ ಅಭಿವೃದ್ಧಿ ನಿಗಮದ ಉದ್ಘಾಟನೆ, ಲಾಂಛನ ಅನಾವರಣ ಕಾರ್ಯಕ್ರಮ ನಡೆಸಲಿದೆ.
● **ಅನಿಲ ಮೆಣಸಿನಕಾಯಿ** ಬಿಜೆಪಿ ಯುವ ನಾಯಕ

ಕನ್ನಡಪ್ರಭ
ಶುಕ್ರವಾರ 15.7.2022

## ಸಣ್ ಸುದ್ದಿ

### ಅರ್ಜಿ ಆಹ್ವಾನ

**ಗದಗ:** 2022-23ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯಡಿಯಲ್ಲಿ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡಮಿ ಮೂಲಕ ಜಲಸಾಹಸ ಕ್ರೀಡೆಯಲ್ಲಿ ತರಬೇತಿ ಪಡೆದು ಪ್ರಮಾಣ ಪತ್ರ ಹೊಂದಿರುವ ಅಥವಾ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಮಾನ್ಯತೆ ಹೊಂದಿರುವ ಸ್ಪರ್ಧಾತ್ಮಕ ಸಾಹಸ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿರುವ, ಪದಕ ವಿಜೇತರಾಗಿರುವ 5 ಪರಿಶಿಷ್ಟ ಜಾತಿಗೆ ಸೇರಿದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಹೊಂದಲು ಸಹಕಾರಿಯಾಗುವಂತೆ ಜಲಸಾಹಸ ಕ್ರೀಡಾ ಉಪಕರಣಗಳನ್ನು ಜಲಸಾಹಸ ಕೇಂದ್ರ ಸ್ಥಾಪನೆ ಮಾಡುವ ಸಂಬಂಧ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಕ್ರೀಡಾಪಟುಗಳು ಅರ್ಜಿಯನ್ನು ಆ. 8ರೊಳಗೆ ಸಹಾಯಕ ನಿರ್ದೇಶಕರು, ಯುವಜನ ಸಬಲೀಕರಣ ಇಲಾಖೆ, ಗದಗ ಇವರಿಗೆ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು. ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು. ಅರ್ಜಿದಾರರು ಈಗಾಗಲೇ ಯಾವುದಾದರೂ ಇಲಾಖೆಯಿಂದ ಸವಲತ್ತನ್ನು ಪಡೆದಿದ್ದಲ್ಲಿ ಕಡ್ಡಾಯವಾಗಿ ವಿವರಿಸಬೇಕು. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ವತಿಯಿಂದ ಆಯೋಜಿಸಿರುವ ಜಲ ಸಾಹಸ ಕ್ರೀಡೆಯ ತರಬೇತುದಾರರ ತರಬೇತಿ ಶಿಬಿರ, ಅಡ್ವಾನ್ಸ್ ತರಬೇತಿ ಶಿಬಿರದಲ್ಲಿ ಎ ಗ್ರೇಡ್‌ನೊಂದಿಗೆ ಪ್ರಮಾಣ ಪತ್ರ ಹೊಂದಿರಬೇಕು ಅಥವಾ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಮಾನ್ಯತೆ ಹೊಂದಿರುವ ಸ್ಪರ್ಧಾತ್ಮಕ ಸಾಹಸ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿರಬೇಕು, ಪದಕ ವಿಜೇತರಾಗಿರಬೇಕು ಅಂತಾರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಮಾನ್ಯತೆ ಹೊಂದಿರುವ ಸ್ಪರ್ಧಾತ್ಮಕ ಸಾಹಸ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಿಗೆ ಆದ್ಯತೆ ನೀಡತಕ್ಕದ್ದು. ಅರ್ಜಿದಾರರು ಯಾವುದೇ ಅಪರಾಧ ಹಿನ್ನೆಲೆ ಹೊಂದಿರಬಾರದು. ಅರ್ಜಿ ನಮೂನೆಗಳು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಕಚೇರಿಯಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 08372-238345 ರ ಮೂಲಕ ಸಂಪರ್ಕಿಸಲು ಕೋರಲಾಗಿದೆ.

### ಬಿಜೆಪಿ ಮುಖಂಡರು ಕಾಂಗ್ರೆಸ್ ಸೇರ್ಪಡೆ

**ರೋಣ:** ತಾಲೂಕಿನ ಅಬ್ಬಿಗೇರಿ 15ಕ್ಕೂ ಹೆಚ್ಚು ಮುಖಂಡರು ಬಿಜೆಪಿ ತೊರೆದು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಜಿ.ಎಸ್. ಪಾಟೀಲ ಸಮ್ಮುಖದಲ್ಲಿ ಗುರುವಾರ ಪಾಟೀಲ ನಿವಾಸದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು. ಅಬ್ಬಿಗೇರಿ ಅಶೋಕ ಹಳ್ಳಿ, ಅರುಣ ಹಳ್ಳಿ, ಮಾರುತಿ ಅಸೂಟಿ, ವಿಜಯ ಡಂಬಳ, ಯು. ಉನಗೌಡ ರುದ್ರಗೌಡ್ರ, ಗುಣೇಪ್ಪ ಅಸುಂಡಿ, ಬಸವರಾಜ ಭಜಂತ್ರಿ, ಅಂದಪ್ಪ ಹಡಪದ, ಶಿವು ಐಹೊಳೆ, ಕಾಳಿಂಗ ಅಸುಂಡಿ ಸೇರಿದಂತೆ 15ಕ್ಕೂ ಹೆಚ್ಚು ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಈ ವೇಳೆ ರೋಣ ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ವೀರಣ್ಣ ಶೆಟ್ಟರ್, ತಾಪಂ ಮಾಜಿ ಸದಸ್ಯ ಪ್ರಭು ಮೇಟಿ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಬಸವರಾಜ ನವಲಗುಂದ ಸೇರಿ ಮುಂತಾದವರು ಉಪಸ್ಥಿತರಿದ್ದರು.

ನರಗುಂದ ತಾಲೂಕಿನ ಶಿರೋಳ ಗ್ರಾಮದ ಯಚ್ಚರೇಶ್ವರ ಮಠದ ಯಚ್ಚರ ಶ್ರೀಗಳಿಗೆ ಗುರು ಪೂರ್ಣಿಮೆ ನಿಮಿತ್ತ ಭಕ್ತರು ಸನ್ಮಾನ ಮಾಡಿ ಗೌರವಿಸಿದರು.

ರೋಣದ ಸರ್ಕಾರಿ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್, ಪೆನ್ ವಿತರಿಸಲಾಯಿತು.

ಗದಗ ನಗರಸಭೆಯಲ್ಲಿ ಸ್ವಚ್ಛತೆಗೆ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳುವಂತೆ ಆಗ್ರಹಿಸಿ ನಗರಸಭೆ ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಯಿತು.

# ಕೆಸರು ಗದ್ದೆ ರಸ್ತೆಗಳಲ್ಲಿ ವಿದ್ಯಾರ್ಥಿಗಳಿಗೆ ಕಿರಿಕಿರಿ

## ರೋಣದ 16ನೇ ವಾರ್ಡಿನ ಶಿವಾನಂದ ನಗರದ ಬಡಾವಣೆ ಮುಖ್ಯ ರಸ್ತೆಯಲ್ಲಿ ಸಂಚರಿಸುವುದೇ ದುಸ್ತರ

● **ಕನ್ನಡಪ್ರಭ ವಾರ್ತೆ** ರೋಣ

ನಿರಂತರ ಮಳೆಯಿಂದಾಗಿ ಪಟ್ಟಣದಾದ್ಯಂತ ಪ್ರಮುಖ ಮತ್ತು ಒಳ ರಸ್ತೆಗಳು ಹದಗೆಟ್ಟು ಕೆಸರು ಗದ್ದೆಯಂತಾಗಿವೆ. ಇದರಿಂದ ಶಾಲಾ ಮಕ್ಕಳಿಗೆ, ಪಾಲಕರಿಗೆ, ಪಾದಚಾರಿಗಳಿಗೆ ತೀವ್ರ ಕಿರಿಕಿರಿಯಾಗಿದ್ದು, ರಸ್ತೆಯೂದ್ದಕ್ಕೂ ಗುಂಡಿಯಲ್ಲಿ ನಿಂತಿರುವ ಗಲೀಜು ನೀರು ತೆರವಿಗಾಗಿ, ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವಲ್ಲಿ ಸ್ಥಳೀಯ ಪುರಸಭೆ ಗಮನ ಹರಿಸದೇ ನಿರ್ಲಕ್ಷ್ಯವಹಿಸಿದ್ದು, ಜನತೆ ಹಿಡಿಶಾಪ ಹಾಕುತ್ತಿದ್ದಾರೆ.

ಪಟ್ಟಣದ 16ನೇ ವಾರ್ಡನ ಶಿವಾನಂದ ನಗರ ಬಡಾವಣೆಯಲ್ಲಿ ಮುಖ್ಯ ರಸ್ತೆ, ಅಡ್ಡ ರಸ್ತೆಗಳುಸಂಪೂರ್ಣಹದಗೆಟ್ಟುರಸ್ತೆಯೂದ್ದಕ್ಕೂ ಬಿದ್ದಿದ್ದ ತಗ್ಗು ಗುಂಡಿ ಬ ಗುಂಡಿಯಲ್ಲಿ ಮಳೆ ನೀರು ವಾಹನ ಪಾದಚಾರಿಗಳು, ಬೈಕ್ ಸವಾರರು ಸರ್ಕಸ್ ಮಾಡಿಕೊಂಡು ರಸ್ತೆ ದಾಟಬೇಕಾದ ಪರಿಸ್ಥಿತಿ ಬಂದೊದಗಿದೆ. ಶಾಲಾ ಮಕ್ಕಳು ಕೆಸರಿನಲ್ಲೆ ನಡೆದುಕೊಂಡು ಶಾಲೆಗೆ ತೆರಳುತ್ತಿದ್ದಾರೆ. ಇಲ್ಲಿನ ಪ್ರಮುಖ ರಸ್ತೆಯೂ ಅತ್ಯಂತ ಹದಗೆಟ್ಟಿದ್ದು, ಈ ಮೂಲಕ ಶಾರದಾ ಪ್ರೌಢಶಾಲೆ, ವಿದ್ಯಾಚೇತನ ಪ್ರಾಥಮಿಕ ಶಾಲೆ, ಬಸವರಾಜ ಶಾಸ್ತ್ರಿ ಪ್ರೌಢಶಾಲೆ, ಆಶಾ ಕಿರಣ ಕಾನ್ವೆಂಟ್ ಶಾಲೆ, ಗ್ರೀನ್ ವುಡ್ ಇಂಟರ ನ್ಯಾಶನಲ್ ಆಂಗ್ಲ ಮಾಧ್ಯಮ ಪ್ರೌಢ ಮತ್ತು ಪ್ರಾಥಮಿಕ ಶಾಲೆ, ಕೆ.ವ್ಹಿ. ಶಾಂತಗೇರಿಮಠ ಪ್ರೌಢಶಾಲೆ , ಮಲ್ಲಿಕಾರ್ಜುನ ಪ್ರಾಥಮಿಕ ಶಾಲೆ, ಶಾರದಾ ಬಾಲಕಿಯರ ವಸತಿ ನಿಲಯ ಹೀಗೆ ಹತ್ತಾರು ಶಿಕ್ಷಣ ಸಂಸ್ಥೆಗಳಿವೆ. ನಿತ್ಯ ಸಾವಿರಕ್ಕು ಹೆಚ್ಚು ಮಕ್ಕಳು ಕೆಸರು ತುಂಬಿದ, ತೆಗ್ಗು ಗುಂಡಿ ಬಿದ್ದ ರಸ್ತೆಯಲ್ಲಿಯೇ ಪ್ರಯಾಸದಾಯವಾಗಿ ನಡೆದುಕೊಂಡು ಹೋಗುತ್ತಿದ್ದಾರೆ.

ಪಾಲಕರಿಗಿಲ್ಲ ನೆಮ್ಮದಿ -

ಕೆಸರುಮಯ ರಸ್ತೆಗೆ ಭಯಗೊಂಡು ಕೆಲ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕರೆತಂದು, ಮರಳಿ ಕರೆದೊಯ್ಯುತ್ತಾರೆ. ಆಕಸ್ಮಾತ ಮಕ್ಕಳೆ ಪಾಲಕರ ಸಹಾಯವಿಲ್ಲದೇ ಶಾಲೆಗೆ ತೆರಳಿದಲ್ಲಿ ರಸ್ತೆಯಲ್ಲಿನ ಕೆಸರಲ್ಲಿ ಬಿದ್ದು ಶಾಲೆಗೆ ಹೋಗದೇ ಮರಳಿ ಮನೆಗೆ ಬರುವದು ಗ್ಯಾರಂಟಿ. ಬೈಕ್ ಸವಾರು ಗುಂಡಿ ತಪ್ಪಿಸಲು ಹೋಗಿ ಟೈರ್ ಸ್ಕಿಡ್ ಆಗಿ ಆಯತಪ್ಪಿ ಬಿದ್ದು ಗಾಯಗೊಳ್ಳುತ್ತಿದ್ದಾರೆ. ಎದುರಿಗೆ ವಾಹನ ಬಂದಲ್ಲಿ ಅದರಿಂದ ಸಿಡಿಯುವ ಕೆಸರನ್ನು ತಪ್ಪಿಸಿಕೊಳ್ಳಲು ಹೋಗಿ ಆಯತಪ್ಪಿ ಮಕ್ಕಳು, ಪಾಲಕರು ಬಿದ್ದು ಗಾಯಗೊಳ್ಳುತ್ತಿದ್ದಾರೆ. ನಿತ್ಯವೂ ನಾನಾ ರೀತಿಯ ಸಮಸ್ಯೆ ಉಂಟು ಮಾಡುವ ರಸ್ತೆಯೂದ್ದಕ್ಕೂ ನಿಂತಿರುವ ಕೆಸರು ನೀರು ತೆರವು, ತೆಗ್ಗುಗುಂಡಿಮುಚ್ಚುವಲ್ಲಿಮುಂದಾಗದ ಪುರಸಭೆ ಅಧಿಕಾರಿಗಳು ಮತ್ತು ಆಡಳಿತ ಮಂಡಳಿ ಬೇಜವಾಬ್ದಾರಿಗೆ ಜನತೆ ತೀವ್ರ ಬೆಸರ ವ್ಯಕ್ತಪಡಿಸುತ್ತಿದ್ದಾರೆ.

ರೋಣದ ಶಿವಾನಂದ ಬಡಾವಣೆಯಲ್ಲಿನ ಪ್ರಮುಖ ರಸ್ತೆಯಲ್ಲಿ ಬಿದ್ದಿರುವ ತೆಗ್ಗು ಗುಂಡಿ ಬಿದ್ದು, ಕೆಸರು ತುಂಬಿಕೊಂಡು ರಸ್ತೆಯಲ್ಲಿಯೇ ಪ್ರಯಾಸದಾಯವಾಗಿ ತೆರಳುತ್ತಿರುವ ಶಾಲಾ ಮಕ್ಕಳು, ಪಾಲಕರು.

### ತಕ್ಷಣವೇ ದುರಸ್ತಿಗೆ ಮುಂದಾಗಿ

ವಿವಿಧ ಶಾಲೆಗೆ ತೆರಳುವ ಶಿವಾನಂದ ಬಡಾವಣೆಯ ಮುಖ್ಯ ರಸ್ತೆ ಹಾಗೂ ಅಡ್ಡ ರಸ್ತೆಗಳಲ್ಲಿ ಬಿದ್ದಿರುವ ತೆಗ್ಗುಗುಂಡಿಗಳನ್ನು ಕನಿಷ್ಠಪಕ್ಷ ಕಲ್ಲಿ, ಕಡಿ, ಕೆಂಪು ಮಣ್ಣು( ಗರಸು) ಹಾಕಿಯಾದರೂ ಮುಚ್ಚುವಲ್ಲಿ, ಜನತೆಗೆ, ಶಾಲಾ ಮಕ್ಕಳಿಗೆ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವಲ್ಲಿ ಸ್ಥಳೀಯ ಪುರಸಭೆ ತಕ್ಷಣವೇ ಗಮನ ಹರಿಸಬೇಕು ಎಂದು ಶಾಲಾ ವಿದ್ಯಾರ್ಥಿಗಳು, ಪಾಲಕರ ಆಗ್ರಹವಾಗಿದೆ.

## ಡಾಂಬರ್ ಕಿತ್ತು ಅಸ್ಥಿಪಂಜರವಾದ ರಸ್ತೆಗಳು

● **ಕನ್ನಡಪ್ರಭ ವಾರ್ತೆ** ಲಕ್ಷ್ಮೇಶ್ವರ

ಲೋಕೋಪಯೋಗಿ ಸಚಿವರ ತವರು ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಬಹುತೇಕ ರಸ್ತೆಗಳಲ್ಲಿ ಭಾರಿ ಗಾತ್ರದ ಗುಂಡಿಗಳು ಬಿದ್ದು ರಸ್ತೆಗಳೆಲ್ಲ ಹಾಳಾಗಿ ಹೋಗಿದ್ದರೂ ಗುಂಡಿ ಮುಚ್ಚಿಸುವ ಕಾರ್ಯ ಮಾಡದಿರುವುದು ಹಾಗೂ ಬಿಜೆಪಿ ಸರ್ಕಾರದ ಕಾರ್ಯವೈಖರಿಗೆ ಈ ರಸ್ತೆಗಳು ಕೈಗನ್ನಡಿಯಾಗಿವೆ ಎಂದು ಜಿಪಂ ಮಾಜಿ ಅಧ್ಯಕ್ಷ ಎಸ್.ಪಿ. ಬಳಿಗಾರ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಕ್ಷ್ಮೇಶ್ವರ -ಗದಗ ಸಂಪರ್ಕ ಕಲ್ಪಿಸುವ ಪಾಳಾ-ಬಾದಾಮಿ ರಸ್ತೆ ನಿರ್ಮಾಣಕ್ಕೆ ಕೋಟ್ಯಂತರ ರು. ಸುರಿದರೂ ರಸ್ತೆಗಳಲ್ಲಿ ಭಾರಿ ಗಾತ್ರದ ಗುಂಡಿಗಳು ಬಿದ್ದು ಸಂಚಾರ ಮಾಡದ ಸ್ಥಿತಿಗೆ ತಲುಪಿದೆ. ಗದಗ ಜಿಲ್ಲೆಯವರೇ ಆಗಿರುವ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ಅವುಗಳನ್ನು ಮುಚ್ಚಿಸುವ ಕಾರ್ಯ ಮಾಡದೆ ನಿಷ್ಕ್ರಿಯರಾಗಿದ್ದಾರೆ. ಲಕ್ಷ್ಮೇಶ್ವರ ತಾಲೂಕಿನ ಹಲವು ರಸ್ತೆಗಳಲ್ಲಿ ಸಂಚಾರ ಮಾಡುವುದು ಎಂದರೆ ಯಮಪುರಿಗೆ ಹೋಗಿ ಬಂದಂತಹ ಅನುಭವವಾಗುತ್ತದೆ. ಕೋಟ್ಯಂತರ ರು.ಗಳನ್ನು ಸುರಿದು ನಿರ್ಮಿಸಿದ ರಸ್ತೆಗಳು 2-3 ತಿಂಗಳಲ್ಲಿ ಕಿತ್ತು ಹೋಗಿರುವುದು ಕಾಮಗಾರಿಯ ಗುಣಮಟ್ಟದ ಬಗ್ಗೆ ಸಾರಿ ಹೇಳುತ್ತಿದ್ದರೂ ಗುತ್ತಿಗೆದಾರರ ಮೇಲೆ ದಿಟ್ಟ ಕ್ರಮ ಕೈಗೊಳ್ಳುವ ಶಕ್ತಿ ಅವರಿಗೆ ಇಲ್ಲವಾಗಿದೆ. ಯಾಕೆಂದರೆ ಶೇ. 40 ಪರ್ಸಂಟೇಜ್ ಕೈಗಿತ್ತ ಮೇಲೆ ಕಾಮಗಾರಿಯ ಭೂಮಿಪೂಜೆನೆರವೇರಿಸುವಕಾರ್ಯ ಮಾಡಿರುವುದರಿಂದ ಅವರ ಕೈಗಳು ಕಟ್ಟಿ ಹಾಕಿದಂತಾಗಿದೆ ಎಂದು ಆರೋಪಿಸಿದರು.

ತಾಲೂಕಿನ ಪೂ. ಬಡ್ನಿ-ದೇವಿಹಾಳ ರಸ್ತೆ. ಲಕ್ಷ್ಮೇಶ್ವರ-ನೆಲೂಗಲ್ಲ ರಸ್ತೆ, ಕುಂದ್ರಳ್ಳಿ-ನಾದಿಗಟ್ಟಿ ರಸ್ತೆ, ಸೂರಣಗಿ-ಬೆಳ್ಳಟ್ಟಿ ರಸ್ತೆ, ಲಕ್ಷ್ಮೇಶ್ವರ-ಅಕ್ಕಿಗುಂದ ರಸ್ತೆ, ಗೊಜನೂರ-ಅಕ್ಕಿಗುಂದ ರಸ್ತೆ, ಲಕ್ಷ್ಮೇಶ್ವರ-ದೊಡ್ಡೂರ ರಸ್ತೆ, ಶಿಗ್ಲಿ-ಗೋವನಾಳ ರಸ್ತೆ, ಲಕ್ಷ್ಮೇಶ್ವರ-ಮುಕ್ತಿಮಂದಿರ ರಸ್ತೆ ಹೀಗೆ ತಾಲೂಕಿನ ಬಹುತೇಕ ರಸ್ತೆಗಳೆಲ್ಲ ಕಿತ್ತು ಹೋಗಿ ದೊಡ್ಡ ಗುಂಡಿಗಳು ಬಿದ್ದಿದ್ದರೂ ಸ್ಥಳೀಯ ಶಾಸಕ ರಾಮಣ್ಣ ಲಮಾಣಿ, ಸಂಸದ ಶಿವಕುಮಾರ ಉದಾಸಿ ಹಾಗೂ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ಕಣ್ಮುಚ್ಚಿ ಕುಳಿತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಲಕ್ಷ್ಮೇಶ್ವರ ಪಟ್ಟಣದಲ್ಲಿ ಹಾಯ್ದು ಹೋಗಿರುವ ಪಾಳಾ-ಬಾದಾಮಿ ರಸ್ತೆಯ ಸ್ಥಿತಿಯಂತೂ ಹೇಳತೀರದಾಗಿದೆ. ರಸ್ತೆಯಲ್ಲಿ ಡಾಂಬರು ಎಲ್ಲಿದೆ ಎಂದು ಹುಡುಕುವಂತಹ ಸ್ಥಿತಿ ಇದೆ. ಬೃಹದಾಕಾರದ ಗುಂಡಿಗಳು ಬಿದ್ದು ವಾಹನ ಸವಾರರು ಹಿಡಿಶಾಪ ಹಾಕುತ್ತಿದ್ದರೂ ಶಾಸಕರ ಹಾಗೂ ಸಚಿವರ ಕಿವಿಗೆ ಬಿದ್ದಂತೆ ಕಾಣುತ್ತಿಲ್ಲ. ಅಧಿಕಾರದ ದರ್ಪದಲ್ಲಿ ಕಿವಿ ಕಿವುಡಾಗಿರಬೇಕು ಎಂದು ಲೇವಡಿ ಮಾಡಿದರು.

■ ಸರ್ಕಾರದ ಕಾರ್ಯವೈಖರಿಗೆ ಕನ್ನಡಿ-ಜಿಪಂ ಮಾಜಿ ಅಧ್ಯಕ್ಷ ಬಳಿಗಾರ ಆರೋಪ

ಲಕ್ಷ್ಮೇಶ್ವರ ಪಟ್ಟಣದ ಮಾನ್ವಿ ಪೆಟ್ರೋಲ್ ಬಂಕ್ ಹತ್ತಿರ ಕಿತ್ತು ಹೋಗಿರುವ ಪಾಳ-ಬಾದಾಮಿ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ.

## ವಿದ್ಯಾರ್ಥಿಗಳಿಗೆ ನೋಟ್ ಬುಕ್, ಪೆನ್ ವಿತರಣೆ

● **ಕನ್ನಡಪ್ರಭ ವಾರ್ತೆ** ರೋಣ

ಸ್ಥಳೀಯ ಎಸ್.ಆರ್. ರಾಯಲ್ ಫೌಂಡೇಶನ್, ಶಾರದಾ ವಾಲ್ಮೀಕಿ ಟ್ರಸ್ಟ್ ವತಿಯಿಂದ ಶಾರದಾ ವಾಲ್ಮೀಕಿ ಹುಟ್ಟು ಹಬ್ಬ ನಿಮಿತ್ತ ಪಟ್ಟಣದ ಸರ್ಕಾರಿ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಗುರುವಾರ ಆಯಾ ಶಾಲೆಗಳಿಗೆ ತೆರಳಿ ಉಚಿತ ನೋಟ್ ಬುಕ್, ಪೆನ್ ವಿತರಿಸಲಾಯಿತು.

ನೋಟ್ ಬುಕ್ ವಿತರಣೆ ಕಾರ್ಯಕ್ರಮವು ಪಟ್ಟಣದ ಎಸ್. ಆರ್. ಪಾಟೀಲ ಮಾದರಿ ಕೇಂದ್ರ ಶಾಲೆ ಆವರಣದಲ್ಲಿ ಜರುಗಿದ್ದು, ಕಾರ್ಯಕ್ರಮವನ್ನು ಬಿಇಒ ಗಾಯತ್ರಿ ಸಜ್ಜನ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸುವ ಮೂಲಕ ಉದ್ಘಾಟಿಸಿದರು.

ಮಕ್ಕಳ ಕಲಿಕೆಗೆ ಅನುಕೂಲವಾಗುವಲ್ಲಿ ಹುಟ್ಟು ಹಬ್ಬ ನೆಪವಾಗಿಟ್ಟುಕೊಂಡು ಕಲಿಕಾ ಸಾಮಗ್ರಿಗಳನ್ನು ವಿತರಿಸುವ ಕಾರ್ಯ ಔಚಿತ್ಯಪೂರ್ಣವಾಗಿದೆ. ಆದರಲ್ಲೂ ಸರ್ಕಾರಿ ಶಾಲಾ ಮಕ್ಕಳಿಗಾಗಿ ಕಲಿಕಾ ಸಾಮಗ್ರಿ ವಿತರಿಸಲು ಮುಂದಾದ ಕ್ರಮ ಶ್ಲಾಘನೀಯವಾಗಿದೆ ಎಂದು ಬಿಇಒ ಗಾಯತ್ರಿ ಸಜ್ಜನ ಹೇಳಿದರು.

ಈ ವೇಳೆ ಶಾರದಾ ವಾಲ್ಮೀಕಿ ಟ್ರಸ್ಟ್ ಅಧ್ಯಕ್ಷೆ ಶಾರದಾ ವಾಲ್ಮೀಕಿ, ರಾಜು ನಾಯಕ, ಮುಖ್ಯೋಪಾಧ್ಯಾಯ ಆರ್.ಜಿ. ಹಿರೇಸಕ್ಕರಗೌಡ್ರ, ಶಿಕ್ಷಕ ವಿಶ್ವನಾಥ ಕಮ್ಮಾರ, ಎಸ್.ಬಿ. ಹಿರೇಮಠ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ಶಿಕ್ಷಕ ಎಚ್.ಬಿ. ಕುರಿ ನಿರೂಪಿಸಿ, ವಂದಿಸಿದರು.

ವಿವಿಧ ಶಾಲೆಗಳ ಮಕ್ಕಳಿಗೆ ವಿತರಣೆ

ಎಸ್.ಆರ್. ಪಾಟೀಲ ಮಾದರಿ ಕೇಂದ್ರ ಶಾಲೆ, ಸರ್ಕಾರಿ ಬಾಲಕಿಯರ ಪ್ರಾಥಮಿಕ ಶಾಲೆ, ನೀರಾವರಿ ಇಲಾಖೆಯ ಸರ್ಕಾರಿ ಪ್ರಾಥಮಿಕ ಶಾಲೆ ಸೇರಿದಂತೆ ಪಟ್ಟಣದ ಸರ್ಕಾರಿ ವಿವಿಧ ಶಾಲೆಗಳ 7ನೇ ತರಗತಿ ವಿದ್ಯಾರ್ಥಿಗಳೆಲ್ಲರಿಗೂ ನೋಟ್ ಬುಕ್, ಪೆನ್ ವಿತರಿಸಲಾಯಿತು.

■ ಮಕ್ಕಳ ಕಲಿಕೆಗೆ ಅನುಕೂಲವಾಗುವಲ್ಲಿ ಹುಟ್ಟು ಹಬ್ಬ ನೆಪವಾಗಿಟ್ಟುಕೊಂಡು ಕಲಿಕಾ ಸಾಮಗ್ರಿಗಳನ್ನು ವಿತರಿಸುವ ಕಾರ್ಯ ಔಚಿತ್ಯಪೂರ್ಣವಾಗಿದೆ.

## ಕೌಜಗೇರಿ ಗ್ರಾಪಂ ಅಧ್ಯಕ್ಷೆಯಾಗಿ ಸಾವಿತ್ರಮ್ಮ ಅವಿರೋಧ ಆಯ್ಕೆ

ರೋಣ ತಾಲೂಕಿನ ಕೌಜಗೇರಿ ಗ್ರಾಪಂ ಅಧ್ಯಕ್ಷರಾಗಿ ಸಾವಿತ್ರಮ್ಮ ಶೇಖಪ್ಪ ಉಗರಗೋಳ ಅವಿರೋಧವಾಗಿ ಆಯ್ಕೆಯಾದರು.

● **ಕನ್ನಡಪ್ರಭ ವಾರ್ತೆ** ಗದಗ

ಜಿಲ್ಲೆಯ ರೋಣ ತಾಲೂಕಿನ ಕೌಜಗೇರಿ ಗ್ರಾಮ ಪಂಚಾಯ್ತಿ ಅಧ್ಯಕ್ಷರ ಆಯ್ಕೆಯು ಮಂಗಳವಾರ ಚುನಾವಣಾ ಪ್ರಕ್ರಿಯೆಯ ಮೂಲಕ ಜರುಗಿತು.

ಹಿಂದಿನ ಅಧ್ಯಕ್ಷೆ ಟಿ.ಸಿ. ಅಮರಗೋಳ ರಾಜೀನಾಮೆಯಿಂದ ತೆರವುಗೊಂಡಿದ್ದ ಸ್ಥಾನಕ್ಕೆ ಸಾವಿತ್ರಮ್ಮ ಶೇಖಪ್ಪ ಉಗರಗೋಳ ಒಬ್ಬರೇ ನಾಮ ಪತ್ರ ಸಲ್ಲಿಸಿದ್ದರಿಂದ ನೂತನ ಅವಧಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ತಾಪಂ ಇಒ ಸಂತೋಷ ಪಾಟೀಲ ಚುನಾವಣೆ ಅಧಿಕಾರಿಯಾಗಿ ಕಾರ್ಯ ನಿರ್ವಸಿದರು.

ಈ ಸಂದರ್ಭದಲ್ಲಿ ಸದಸ್ಯರಾದ ವಿಜಯಕುಮಾರ ನೀಲಗುಂದ, ತ